ದಿನವನ್ನು ನಿಗದಿಪಡಿಸಿ ಆ ಕಡೆಗೆ ಸುದ್ದಿಯನ್ನು ಮುಟ್ಟಿಸಿಯೂ ಬಿಟ್ಟ. ದೊಡ್ಡಯ್ಯ, ಮುದ್ದನುಮಕ್ಕನ ತಮ್ಮ ಮತ್ತು ತಂಗ್ಯನ ಫ್ಯಾಮಿಲಿ ಒಟ್ಟು ಐದು ಜನ ಪ್ರಯಾಣ ಬೆಳೆಸಿದ್ದರು. ಹೆಣ್ಣಿನ ಮನೆ ಪರ್ವಾಗಿಲ್ಲ ಅನ್ನಿಸಿತು. ಗಂಡಿನ ಕಡೆಯವರು ಹೆಣ್ಣಿಗೆ ವಾಲೆ, ಜುಮ್ಕಿ ಕೊಡುವುದೆಂದು, ಹೆಣ್ಣಿನ ಕಡೆಯವರು ಗಂಡಿಗೆ ವಾಚು, ಉಂಗುರ ಹಾಕುವುದಾಗಿಯೂ ಒಪ್ಪಂದವಾಯಿತು. ಬರುವ ಆಷಾಢ ಕಳೆದ ಮೊದಲ ವಾರದಲ್ಲೇ ಮದುವೆ ಇಟ್ಟುಕೊಳ್ಳಲು ತೀರ್ಮಾನ ಕೂಡಾ ಮಾಡಿಬಿಟ್ಟಿದ್ದರು. ಹೆಣ್ಣಿನ ಮನೆಯವರು ಒಬ್ಬೊಟ್ಟು ಗಿಬ್ಬೊಟ್ಟು ಮಾಡದೆ ರವೆ ಪಾಯಸ, ಅಕ್ಕಿ ಶ್ಯಾವಿಗೆ, ಚಿತ್ರಾನ್ನ ಜೊತೆಗೆ ಹಪ್ಪಳ, ಸಂಡಿಗೆಯ ಟ್ರೆಡಿಷನಲ್ ಅಡುಗೆ ಮಾಡಿದ್ದರು. ತಂಗ್ಯನು ಎರಡು ಕೊಂತ ಶ್ಯಾವಿಗೆ ಮೇಲೆ ಬಿಸಿ ಬಿಸಿ ಪಾಯಸ ಹಾಕಿಸಿಕೊಂಡು ಹೊಟ್ಟೆ ತುಂಬಾ ಹೊಡೆದಿದ್ದ. ಹುಡುಗಿಯ ಚಿಕ್ಕಮ್ಮ, ''ನಮ್ಮ ನಿರ್ಮಲನೇ ಅಡುಗೆ ಮಾಡಿದ್ದು. ಮುದ್ದೆಯಿಂದ ಹಿಡ್ದು ಹಬ್ಬದಡುಗೆ, ಮಟನ್ ಸಾರು ಎಲ್ಲಾ ಮಾಡೋದನ್ನು ಚನ್ನಾಗಿ ಕಲ್ತವ್ಳೆ.'' ಎಂದಿದ್ದಳು ಪಾಯಸ ಬಡಿಸುತ್ತಾ. ತಂಗ್ಯನಿಗೆ ಪಾಯಸ ತಿನ್ನುವಾಗ ದ್ರಾಕ್ಷಿ, ಗೋಡಂಬಿ ಜೊತೆಗೆ ಏಲಕ್ಕಿ ಬುಡ್ಡು ಹಲ್ಲಿಗೆ ಸಿಕ್ಕಿ ರೋಮಾಂಚನವಾಗಿತ್ತು. ಹಾಗೆ ನೋಡಿದರೆ ರಂಗಶ್ಯಾಮಣ್ಣ ಮತ್ತು ತಂಗ್ಯನಿಗೆ ಎಲ್ಲಾ ಸಿಹಿ ಅಡುಗೆಗಳಿಗಿಂತಲೂ ಪಾಯಸವೇ ತುಂಬಾ ಇಷ್ಟವಾಗುತ್ತಿದ್ದದ್ದು. ರಂಗಶ್ಯಾಮಣ್ಣನಂತೂ ತಿಂಗಳಿಗೆರಡು ಸಾರಿಯಾದರೂ ಪಾಯಸ ಮಾಡಿಸಿಕೊಂಡು ಜೂರುತ್ತಿದ್ದನಲ್ಲದೆ ಮದುವೆ ಗಿದುವೆಗಳಿಗೆ ಹೋದರೆ ಬೇರೆಲ್ಲಾ ಐಟಂಗಳನ್ನು ಸ್ಯಾಂಪಲ್‌ಗೆ ಬಾಯಿಗಿಟ್ಟುಕೊಂಡು ಹೊಟ್ಟೆ ತುಂಬಾ ಪಾಯಸವನ್ನೆ ತುಂಬಿಕೊಂಡು ಬರುತ್ತಿದ್ದ. ಅಪ್ಪನ ಹೆರಿಡಿಟಿ ತಂಗ್ಯನಿಗೂ ಸುಮಾರಾಗಿಯೇ ತಗುಲಿಕೊಂಡಿತ್ತು. ಪಾಯಸ ನೆಕ್ಕುವಾಗ ತಂದೆ ಮಗ ಇಬ್ಬರೂ ಒಬ್ಬರ ಮುಖವನ್ನೊಬ್ಬರು ನೋಡಿಕೊಂಡು ಸಣ್ಣಗೆ ನಗಾಡಿದ್ದರು. ಹೊರಗೆ ಎಲ್ಲಾದರೂ ಊಟಕ್ಕೆ ಹೋದರೆ ಮುದ್ದನುಮಕ್ಕ ರಂಗಶ್ಯಾಮಣ್ಣ, ತಂಗ್ಯ ಇಬ್ಬರಿಗೂ ಒಂದೊಂದು ಏಲಕ್ಕಿ ಬುಡ್ಡನ್ನ ಜೇಬಿಗೆ ಹಾಕುತ್ತಿದ್ದಳು. ಎಂಥ ಕೆಟ್ಟ ಊಟ ಮಾಡಿದರೂ, ಯಾರಾದರೂ ಊಟದಲ್ಲಿ ಕೈಮುಸುಗು ಇಟ್ಟರೂ ಒಂದು ಏಲಕ್ಕಿ ಬುಡ್ಡನ್ನು ತಿಂದರೆ ಕರುಳಿಗೆ ಒಂದಿಷ್ಟೂ ಕೆಡಕಾಗುವುದಿಲ್ಲವೆಂದು ಯಾವೊತ್ತೋ ಹೊಟ್ಟೆ ನೋವೆಂದು ಹೋದಾಗ ಪೂಜಾರಪ್ಪನವರ ಹೆಂಡತಿ ಸರಸ್ವತಮ್ಮನವರು ಹೇಳಿದ್ದು ಮುದ್ದನುಮಕ್ಕ ಮರೆತಿರಲಿಲ್ಲ. ತಂಗ್ಯನಿಗೆ ಏಲಕ್ಕಿ ಬುಡ್ಡು ಅಗಿಯುತ್ತಿದ್ದರಿಂದ ಬಾಯಿ ತುಂಬಾ ತುಂಬಿಕೊಳ್ಳುತ್ತಿದ್ದ ಘಮ್ಮನೆಯ ವಾಸನೆ ಬಹಳವೇ ಇಷ್ಟವಾಗುತ್ತಿತ್ತು. ಬಾಡು ಗೀಡು ಮಾಡಿದಾಗ ತಾನೇ ಡಬ್ಬಿಯಿಂದ ಏಲಕ್ಕಿ ಬುಡ್ಡನ್ನು ಎಗರಿಸಿ ಬಾಯಿಗೆಸೆದುಕೊಳ್ಳುತ್ತಿದ್ದ. ಅದೇ ಗುಂಗಿನಲ್ಲಿ ತಂಗ್ಯನು, ''ಒಂದೇಲಕ್ಕಿ ಬುಡ್ಡು ಕೊಡ್ತೀರ'' ಎಂದು ಹೆಣ್ಣಿನ ಚಿಕ್ಕಮ್ಮನನ್ನು ಕೇಳಿಬಿಟ್ಟಿದ್ದ. ಅವರು ಏಲಕ್ಕಿಯನ್ನು ಕೊಟ್ಟ ಕೂಡಲೇ ಸುಲಿದು ಬಾಯಿಗೆಸೆದುಕೊಂಡಿದ್ದ. ''ಅಂಥ ಕೈ ಕೆಲಸದೋರು ನಮ್ಮೂರಗಿಲ್ಲ ಬಿಡ್ರಿ.'' ಎಂದು ಹೆಣ್ಣಿನ ಚಿಕ್ಕಮ್ಮ ಮಾರ್ಮಿಕವಾಗಿ ನುಡಿದಿದ್ದಳು. ಮುದ್ದನುಮಕ್ಕ, ''ಛೆ ಛೇ ಬಿಡ್ತು ಅನ್ರಿ, ಬಾಯಿ ಘಮ್ ಅನ್ಲಿ ಅಂತ ನಮ್ಮಪ್ಪಯ್ಯ ರೂಢಿ ಮಾಡ್ಕಂಡವ್ನೆ.'' ಎಂದಿದ್ದಳು. ''ಗಂಡುಸ್ರು ಏಲಕ್ಕಿ ಬುಡ್ಡು ಜಾಸ್ತಿ ತಿನ್ಬಾರ್ದಮ್ಮಯ್ಯ, ಪೌರುಸಕ್ಕೆ ಪೆಟ್ಟಾಗ್ತೈತೆ'' ಎಂದು ತಂಗ್ಯನನ್ನೇ ನೋಡುತ್ತಾ ಕುಳಿತಿದ್ದ ಹೆಣ್ಣಿನ ಅಜ್ಜಿ ಬೊಚ್ಚು ಬಾಯಲ್ಲಿ ನಾಚಿಕೆ ತುಂಬಿಕೊಂಡು ನಕ್ಕಿದ್ದಳು. ಅಜ್ಜಿಯ ಮಾತಿಗೆ ಎಲ್ಲರೂ ನಕ್ಕಿದ್ದರು.

''ಹುಡುಗ, ಹುಡುಗಿ ಏನಾರ ಮಾತಾಡ್ಕಂಬಂಗಿದ್ರೆ ಒಂದೈದ್ ನಿಮಿಷ ಅಡುಗೆ ಮನೇಲಿ ಬಿಡ್ರಿ.'' ಎಂದು ಮದುವೆ ಮುಂದಾಳು ದೊಡ್ಡಯ್ಯ ಮಾತೆತ್ತುವುದರೊಂದಿಗೆ ತಂಗ್ಯನು, ''ಹೂಂ ಒಂದು ಗ್ಲಾಸ್ ನೀರು ಬೇಕು.'' ಎಂದು ಅಡುಗೆ ಮನೆಗೆ ಹೋಗಿದ್ದ. ಅಡುಗೆ ಮನೆ ಬಾಗಿಲಲ್ಲೇ ನಿಂತಿದ್ದ ಹುಡುಗಿ ತಾನೂ ಹೋಗಿ ಗ್ಲಾಸಿನಲ್ಲಿ ನೀರು ತುಂಬಿ ಕೊಟ್ಟಿದ್ದಳು. ಹುಡುಗಿ ಕಡೆಯಿಂದ ಒಳ್ಳೆಯ ಘಮ ಘಮ ವಾಸನೆ ಬರುತ್ತಿತ್ತು. ಆ ವಾಸನೆಗೆ ಪರವಶವಾದವನಂತೆ ತಂಗ್ಯನು, ''ಯಾವ್ ಪೌಡ್ರು